ದಿನಾಂಕ 27-10-2017 ರಂದು ನ್ಯಾಯಾಲಯದ ನಿಯೋಜಕರ ಮೂಲಕ ಡಿಡಬ್ಲ್ಯೂ-01 ರವರ ದಾಖಲಾತಿಗಳನ್ನು ಹಾಜರು ಮಾಡಿ ದಾಖಲಾತಿಯನ್ನು ನಿಶಾನೆಯನ್ನಾಗಿ ಗುರುತಿಸಲು ಶ್ರೀ.ಬಿ.ಎಸ್.ಎಂ ವಕೀಲರು ನೇಮಕವಾಗಿದ್ದು, ಆ ಪ್ರಕಾರ ದಿ. 27-10-2017 ರಂದು ಶ್ರೀ.ಬಿ.ಎಸ್.ಎಂ. ವಕೀಲರು ನ್ಯಾಯಾಲಯದ ನಿಯೋಜಕರಾಗಿ ನಿಡಿ-1 ರಿಂದ ನಿಡಿ-14ರವರೆಗೆ ದಾಖಲಾತಿಗಳನ್ನು ಗುರುತಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲನೆ ಮಾಡಿ ನಿಡಿ-1 ರಿಂದ ನಿಡಿ-14 ಅನ್ನು ಖಚಿತತೆಯನ್ನು ಪಡೆಸಿಕೊಂಡು ಕಡತಕ್ಕೆ ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು:: ವಾದಿಗಳ ಪರವಾಗಿ ಶ್ರೀ.ವಿವಿಆರ್.ವಕೀಲರಿಂದ ::

ವಾದಿಯು ತನ್ನ ಹಿಸ್ಸೆಗಾಗಿ ದಾವೆಯನ್ನು ಹಾಕಿರುತ್ತಾರೆ. 6ನೇ ಪ್ರತಿವಾದಿಯು ಒಬ್ಬರೇ ತಮ್ಮ ಗ್ರಾಮದಲ್ಲಿ ವಾಸವಾಗಿರುತ್ತಾರೆ ಮಕ್ಕಳು ಬೆಂಗಳೂರಿನಲ್ಲಿ ವಾಸ ಇರುತ್ತಾರೆ. ವಾದಿಯರು 6ನೇ ಪ್ರತಿವಾದಿಯ ಮಕ್ಕಳು. ವಾದಿಯರು ಸುಮಾರು 30-35 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇರುತ್ತಾರೆ ಪಿಳ್ಳ ನಾರಾಯಣಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಕೊಂಡಿರುವುದಿಲ್ಲ. ಪಿಳ್ಳ ನಾರಾಯಣಪ್ಪನಿಗೆ ಚನ್ನಪ್ಪ, ವಾದಿ 1 ಮತ್ತು 2 ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ವಾದಿಯು ಈ ದಾವೆಯನ್ನು ಎಷ್ಟು ದಾವಾ ಅಸ್ತಿಗಳ ಮೇಲೆ ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ಪ್ರಮಾಣ ಪತ್ರಿಕೆಯ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

(ಶ್ರೀ.ಶಿವಕುಮಾರ ಜಿ.ಜೆ)
ಅಪರ ಸಿ.ನ್ಯಾ. ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.